# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 865 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 22.02.2024 |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯಮಂತ್ರಿರವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ 10 ವರ್ಷಗಳಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸ್ಥಳೀಯ ಸಂಸ್ಥೆಗಳ ತೆರಿಗೆ ಹಣದಲ್ಲಿ ಕೆರೆ ಅಭಿವೃದ್ಧಿ ಸೆಸ್ ಮೂಲಕ ಎಷ್ಟು ಹಣವನ್ನು ಸಂಗ್ರಹ ಮಾಡಲಾಗಿದೆ; | ಕಳೆದ ಹತ್ತು ವರ್ಷಗಳಲ್ಲಿ (2013-14 ರಿಂದ 2022-23) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕೆರೆ ಅಭಿವೃದ್ಧಿ ಸೆಸ್ ಮೂಲಕ ರೂ.78.23 ಕೋಟಿ ಸಂಗ್ರಹಿಸಲಾಗಿದೆ. |
| (ಆ) | ಬಿ.ಡಿ.ಎ. ವತಿಯಿಂದ ಕಳೆದ 10ವರ್ಷದಿಂದ ಎಷ್ಟು ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ; ಇದಕ್ಕೆ ಎಷ್ಟು ಹಣ ವೆಚ್ಚವಾಗಿದೆ; ಪ್ರಸ್ತುತ ಇದರ ಕಾಮಗಾರಿಗಳು ಯಾವ ಹಂತದಲ್ಲಿದೆ; | ಕಳೆದ ಹತ್ತು ವರ್ಷಗಳಲ್ಲಿ (2013-14 ರಿಂದ 2022-23) ಪ್ರಾಧಿಕಾರದ ವತಿಯಿಂದ 59 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇದಕ್ಕೆ ಒಟ್ಟು ರೂ.317.86 ಕೋಟಿ ವೆಚ್ಚವಾಗಿರುತ್ತದೆ. ಈ ಪೈಕಿ ಬೆಳ್ಳಂದೂರು, ವರ್ತೂರು, ರಾಮಸಂದ್ರ ಮತ್ತು ಕೊಮ್ಮಘಟ್ಟ ಕೆರೆಗಳ ಕಾಮಗಾರಿಗಳು ಮಾತ್ರ ಪ್ರಗತಿಯಲ್ಲಿರುತ್ತವೆ. |
| ಇ) | ಬಿ.ಡಿ.ಎ. ಯಿಂದ ಬಿ.ಬಿ.ಎಂ.ಪಿ ಗೆ ಎಷ್ಟು ಕೆರೆಗಳನ್ನು ಅಭಿವೃದ್ಧಿಪಡಿಸಲು ಹಸ್ತಾಂತರಿಸಲಾಯಿತು; ಹಾಗೂ ಹಸ್ತಾಂತರಿಸಲು ಕಾರಣವೇನು; | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 108 ಕೆರೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿರುತ್ತದೆ.<br><br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕೆರೆಗಳ ನಿರ್ವಹಣೆಗೆ ಪ್ರತ್ಯೇಕ ಕೋಶವಿರುವುದರಿಂದ ಹಾಗೂ ಈ ಕೆರೆಗಳು ಪಾಲಿಕೆಯ ವ್ಯಾಪ್ತಿಯಲ್ಲಿದ್ದುದರಿಂದ ಹಸ್ತಾಂತರಿಸಲಾಗಿದೆ. |
| (ಈ) | ಈ ಕೆರೆಗಳ ಜಾಗವು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು; | ಕೆರೆಗಳ ಒತ್ತುವರಿ ಮತ್ತು ಪ್ರಾಧಿಕಾರವು ತೆಗೆದುಕೊಂಡ ಕ್ರಮಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| (ಉ) | ಕಳೆದ 10 ವರ್ಷದಿಂದ ಕೆರೆ ಅಭಿವೃದ್ಧಿಗಾಗಿ ಸರ್ಕಾರ ಒದಗಿಸಿರುವ ಅನುದಾನವೆಷ್ಟು; ಅವುಗಳನ್ನು ಯಾವ ಯಾವ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗಿದೆ; ಪ್ರಸ್ತುತ ಎಷ್ಟು ಕೆರೆಯ ಕಾಮಗಾರಿಗಳು ಪೂರ್ಣಗೊಂಡಿದೆ; (ಸಂಪೂರ್ಣ ವಿವರಗಳನ್ನು ಒದಗಿಸುವುದು) | ಕಳೆದ ಹತ್ತು ವರ್ಷಗಳಲ್ಲಿ ಕೆರೆ ಅಭಿವೃದ್ಧಿಗಾಗಿ ಸರ್ಕಾರವು ರೂ.250.0 ಕೋಟಿ ಅನುದಾನವನ್ನು ಒದಗಿಸಿದ್ದು, ಸದರಿ ಅನುದಾನವನ್ನು ಬೆಳ್ಳಂದೂರು ಮತ್ತು ವರ್ತೂರು ಕೆರೆಗಳ ಅಭಿವೃದ್ಧಿ ಮತ್ತು ಪುನಶ್ಚೇತನ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗಿರುತ್ತದೆ.<br><br>ವಿವರಗಳನ್ನು ಅನುಬಂಧ -2 ರಲ್ಲಿ ನೀಡಲಾಗಿದೆ. |

---2

| | | |
|---|---|---|
| (ಊ) | ಕೆರೆಯ ಅಭಿವೃದ್ಧಿಗಾಗಿ ಸರ್ಕಾರ ಒದಗಿಸಿರುವ ಸಾವಿರಾರು ಕೋಟಿ ಹಣವು ಅವೈಜ್ಞಾನಿಕವಾದ ಕಾಮಗಾರಿಗಳಿಂದ ಇಂದಿಗೂ ಕೆರೆಗಳು ಸ್ವಚ್ಛವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? | ಪ್ರಚಲಿತ ತಾಂತ್ರಿಕ ಮಾನದಂಡಗಳು ಹಾಗೂ ಜೀವ ವೈವಿಧ್ಯತೆಯನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಕೆರೆ ಅಭಿವೃದ್ಧಿ ಕಾಮಗಾರಿಯ ತಾಂತ್ರಿಕ ಯೋಜನಾ ವರದಿಯನ್ನು ಸಿದ್ಧಪಡಿಸಿ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮಾರ್ಗಸೂಚಿಗಳ ಬೆಳಕಿನಲ್ಲಿ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತದೆ.<br>ಬೆಳ್ಳಂದೂರು ಮತ್ತು ವರ್ತೂರು ಕೆರೆಗಳ ಅಭಿವೃದ್ಧಿಗಾಗಿ ಸರ್ಕಾರವು ಒದಗಿಸಿರುವ ರೂ.250.0 ಕೋಟಿ ಹಣವನ್ನು ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪೀಠದ ಆದೇಶದನ್ವಯ ರಚಿಸಿರುವ ಸಮಿತಿಯು ವೈಜ್ಞಾನಿಕವಾಗಿ ರೂಪಿಸಿರುವ ಯೋಜನೆಯಂತೆ ಸದರಿ ಕೆರೆಗಳ ಪುನರುಜ್ಜೀವನ ಕಾಮಗಾರಿ ಪ್ರಗತಿಯಲ್ಲಿದೆ. |

**ಸಂಖ್ಯೆ: ನಅಇ 64 ಎಂಎನ್‌ಜೆ 2024**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ

ಅನುಬಂಧ-1

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಕೆರೆಗಳ ವಿವರ (ಒತ್ತುವರಿ ಮತ್ತು ಕೈಗೊಂಡ ಕ್ರಮಗಳು)

| ಕ್ರ.ಸಂ. | ಕೆರೆಗಳ ಹೆಸರು | ಗ್ರಾಮ | ಸರ್ವೆ ನಂ. | ಕೆರೆಗಳ ವಿಸ್ತೀರ್ಣ | | ತೆರವುಗೊಳಿಸ ಬೇಕಾಗಿರುವ ಒತ್ತುವರಿಗಳ ವಿಸ್ತೀರ್ಣ | | ಕೈಗೊಂಡಿರುವ ಕ್ರಮ | ವ್ಯಾಪ್ತಿ | ಷರಾ |
|---|---|---|---|---|---|---|---|---|---|---|
| | | | | ಎಕರೆ | ಗುಂಟೆ | ಎಕರೆ | ಗುಂಟೆ | | | |
| 1 | ಬೆಳ್ಳಂದೂರು | ಬೆಳ್ಳಂದೂರು<br>ಇಬ್ಬಲೂರು<br>ಅಗರ<br>ಬೇಲೂರು | 1<br>12<br>43<br>2 | 916 | 17 | 4 | 8 | ಒತ್ತವರಿ ಪ್ರದೇಶದ ಸಂಬಂಧ ಅಂಬೇಡ್ಕರ್ ನಗರ ಸ್ಲಂ ನಿವಾಸಿಗಳು ಮಾನ್ಯ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ: 50953/2019 ರಂತೆ ಹೂಡಿದ್ದು, ಪ್ರಸ್ತುತ ಪ್ರಕರಣವು ಬಾಕಿ ಉಳಿದಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ಆದೇಶದಂತೆ ಕ್ರಮವಹಿಸಲಾಗುವುದು. | ಬಿ.ಬಿ.ಎಂ.ಪಿ | ಸಮಗ್ರ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಪ್ರಸ್ತುತ ಹೂಳೆತ್ತುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |
| 2 | ವರ್ತೂರು | ಅಮಾನಿ ಬೆಳ್ಳಂದೂರು ಖಾನೆ | 319 | 439 | 34 | - | - | ಪೂರ್ಣಪ್ರಮಾಣದಲ್ಲಿ ಒತ್ತುವರಿಯನ್ನು ತೆರವುಗೊಳಿಸಿ, ಕೆರೆಯ ಸುತ್ತಲೂ ತಂತಿಬೇಲಿಯನ್ನು ಅಳವಡಿಸಲಾಗಿರುತ್ತದೆ. | ಬಿ.ಬಿ.ಎಂ.ಪಿ | ಸಮಗ್ರ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಪ್ರಸ್ತುತ ಹೂಳೆತ್ತುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |
| 3 | ಚಿಕ್ಕಬಾಣಾವಾರ | ಚಿಕ್ಕಬಾಣಾವಾರ,<br>ಸೋಮಶೆಟ್ಟಿಹಳ್ಳಿ,<br>ಕೆರೆಗುಡ್ಡದಹಳ್ಳಿ<br>ಮತ್ತು<br>ಗಾಣಿಗರಹಳ್ಳಿ | 3, 73,<br>22, &<br>11, 15 | 105 | 15 | 3 | 27 | ಒಟ್ಟಾರೆ 3.2 ಕಿ.ಮೀ ನಲ್ಲಿ 1.50 ಕಿ.ಮೀ ಗೆ ತಂತಿಬೇಲಿ ಅಳವಡಿಸಲಾಗಿದೆ | ಟಿ.ಎಂ.ಸಿ | ಒತ್ತುವರಿಯನ್ನು ತೆರವುಗೊಳಿಸಲು ತಹಶೀಲ್ದಾರ್ ಬೆಂಗಳೂರು ಉತ್ತರ ರವರಿಗೆ ಪತ್ರವನ್ನು ಬರೆಯಲಾಗಿದೆ. |

## ಅನುಬಂಧ-2

### ರಾಜ್ಯ ಸರ್ಕಾರದ ಅನುದಾನದಿಂದ ಕೈಗೊಂಡಿರುವ ಕೆರೆಗಳ ಕಾಮಗಾರಿಗಳ ವಿವರ

| ಕ್ರ.ಸಂ. | ಕೆರೆಗಳ ಹೆಸರು | ಗ್ರಾಮ | ಸರ್ಕಾರದಿಂದ ಪಡೆದ ಅನುದಾನದ ಮೊತ್ತ ಲಕ್ಷಗಳಲ್ಲಿ | | ಜನವರಿ-2024 ರ ಅಂತ್ಯಕ್ಕೆ ಬಳಸಿಕೊಳ್ಳಲಾದ ಅನುದಾನದ ಮೊತ್ತ | ಕಾಮಗಾರಿಯ ಹಂತ |
|---|---|---|---|---|---|---|
| | | | **2017-18** | **2020-21** | | |
| 1 | ಬೆಳ್ಳಂದೂರು | ಬೆಳ್ಳಂದೂರು<br>ಇಬ್ಬಲೂರು<br>ಅಗರ<br>ಬೇಲೂರು | 5000.00 | 10000.00 | 10225.71 | ಕಾಮಗಾರಿ ಪ್ರಗತಿಯಲ್ಲಿರುತ್ತದೆ. |
| 2 | ವರ್ತೂರು | ಅಮಾನಿ ಬೆಳ್ಳಂದೂರು ಖಾನೆ | | 10000.00 | 8347.11 | ಕಾಮಗಾರಿ ಮುಕ್ತಾಯ ಹಂತದಲ್ಲಿರುತ್ತದೆ. |
| | | ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ | 5000.00 | 20000.00 | **18572.82** | |